## ಬಸಾಪಟ್ಟಣದಲ್ಲಿ ಮೇಣದಬತ್ತಿ ಬೆಳಗಿಸುವ ಮತದಾನ ಜಾಗೃತಿ ಕಾರ್ಯಕ್ರಮ
# ಎಲ್ಲರ ಗಮನಸೆಳೆದ ವಿವಿಪ್ಯಾಟ್ ಚಿತ್ರದ ರಂಗೋಲಿ



ಕೊಪ್ಪಳ ಏಪ್ರಿಲ್ 13 : ಗಂಗಾವತಿ ತಾಲೂಕಿನ ಬಸಾಪಟ್ಟಣ ಗ್ರಾ.ಪಂ. ಕಾರ್ಯಾಲಯದ ಮುಂದೆ ಲೋಕಸಭಾ ಚುನಾವಣೆ ಅಂಗವಾಗಿ ತಾಲೂಕು ಸ್ವೀಪ್ ಸಮಿತಿ ವತಿಯಿಂದ ತಾ.ಪಂ. ಕಾರ್ಯನಿರ್ವಾಹಕ ಅಧಿಕಾರಿಗಳಾದ ಲಕ್ಷ್ಮೀದೇವಿ ಅವರ ಅಧ್ಯಕ್ಷತೆಯಲ್ಲಿ ಮೇಣದ ಬತ್ತಿ ಬೆಳಗಿಸುವ ಮೂಲಕ ಶುಕ್ರವಾರ ರಾತ್ರಿ ಮತದಾನ ಜಾಗೃತಿ ಮೂಡಿಸಲಾಯಿತು.

ಗ್ರಾಮದ ಚುನಾವಣೆ ರಾಯಭಾರಿಗಳಾದ ತೃತಿಯ ಲಿಂಗಿಗಳಾದ ಶರಣಮ್ಮ ಹಾಗೂ ರಾಜಶೇಖರ ಅವರು ನನ್ನ ಮತ, ನನ್ನ ಹಕ್ಕು ಚುನಾವಣೆ ಘೋಷವಾಖ್ಯಕ್ಕೆ ಮೇಣದಬತ್ತಿ ಬೆಳಗಿಸುವ ಮೂಲಕ ಚಾಲನೆ ನೀಡಿದರು.

ತಾಲೂಕು ಸ್ವೀಪ್ ಸಮಿತಿ ಅಧ್ಯಕ್ಷರು ಹಾಗೂ ತಾ.ಪಂ. ಕಾರ್ಯನಿರ್ವಾಹಕ ಅಧಿಕಾರಿಗಳಾದ ಶ್ರೀಮತಿ ಲಕ್ಷ್ಮೀದೇವಿ ಅವರು ಮಾತನಾಡಿ, ಲೋಕಸಭಾ ಚುನಾವಣೆಯಲ್ಲಿ ಶೇ.100 ರಷ್ಟು ಮತದಾನ ಮಾಡಬೇಕು. ಯಾರೂ ಕೂಡ ಯಾವುದೇ ಆಸೆ, ಆಮೀಷಕ್ಕೆ ಬಲಿಯಾಗಬಾರದು. ಎಲ್ಲರೂ ಕಡ್ಡಾಯವಾಗಿ ಮತ ಚಲಾಯಿಸಬೇಕು. 2024 ರ ಪ್ರಜಾಪ್ರಭುತ್ವ ಹಬ್ಬದಲ್ಲಿ ಪಾಲ್ಗೊಳ್ಳುವಂತೆ ಕರೆ ನೀಡಿದರು.

ನಂತರ ಮತದಾನ ಮಹತ್ವ ಕುರಿತು ಪ್ರತಿಜ್ಞಾ ವಿಧಿ ಬೋಧಿಸಲಾಯಿತು. ಗ್ರಾ.ಪಂ. ಕಾರ್ಯಾಲಯದ ಮುಂದೆ ಬಿಡಿಸಲಾಗಿದ್ದ ವಿವಿಪ್ಯಾಟ್ ಚಿತ್ರದ ರಂಗೋಲಿ ಎಲ್ಲರ ಗಮನ ಸೆಳೆಯಿತು. ಬಸಾಪಟ್ಟಣ ಗ್ರಾಪಂ ಪಿಡಿಓ ವಿದ್ಯಾವತಿ, ಕಾರ್ಯದರ್ಶಿಗಳಾದ ನಾಗೇಶ ಸಜ್ಜನ್, ಎಸ್.ಡಿ.ಎ ಶ್ರೀನಿವಾಸ, ತಾಲೂಕು ಐಇಸಿ ಸಂಯೋಜಕರು, ಗ್ರಾ.ಪಂ. ಸಿಬ್ಬಂದಿಗಳು, ಎನ್.ಆರ್.ಎಲ್.ಎಂ ಎಂ.ಬಿ.ಕೆ., ಸ್ವಸಹಾಯ ಗುಂಪುಗಳ ಸದಸ್ಯರು, ಆಶಾ, ಅಂಗನವಾಡಿ ಕಾರ್ಯಕರ್ತೆಯರು ಇದ್ದರು.

## ಬಳ್ಳಾರಿ ಲೋಕಸಭೆ ಸಾರ್ವತ್ರಿಕ ಚುನಾವಣೆ: ವೆಚ್ಚ ವೀಕ್ಷಕರ
# ನೇಮಕ–ಜಿಲ್ಲಾಧಿಕಾರಿ ಪ್ರಶಾಂತ್ ಕುಮಾರ್ ಮಿಶ್ರಾ



ಬಳ್ಳಾರಿ,ಏ.: ಲೋಕಸಭಾ ಕ್ಷೇತ್ರದ ಚುನಾವಣೆಗೆ ಚುನಾವಣಾ ವೆಚ್ಚ ಉಸ್ತುವಾರಿ ಮಾಡಲು ಚುನಾವಣಾ ಆಯೋಗದಿಂದ ಇಬ್ಬರು ಚುನಾವಣಾ ವೆಚ್ಚದ ವೀಕ್ಷಕರನ್ನು ನಿಯೋಜಿಸಲಾಗಿದ್ದು, ಚುನಾವಣಾ ವೆಚ್ಚಕ್ಕೆ ಸಂಬಂಧಿಸಿದ ದೂರುಗಳೇನಾದರೂ ಇದ್ದಲ್ಲಿ ಸಾರ್ವಜನಿಕರು ಇವರಿಗೆ ಸಂಪರ್ಕಿಸಬಹುದು ಎಂದು ಜಿಲ್ಲಾ ಚುನಾವಣಾಧಿಕಾರಿ ಹಾಗೂ ಜಿಲ್ಲಾಧಿಕಾರಿ ಪ್ರಶಾಂತ್ ಕುಮಾರ್ ಮಿಶ್ರಾ ಅವರು ತಿಳಿಸಿದ್ದಾರೆ.

*ಚುನಾವಣಾ ವೆಚ್ಚ ವೀಕ್ಷಕರ ವಿವರ ಮತ್ತು ನಿಯೋಜಿಸಿದ ವಿಧಾನಸಭಾ ಕ್ಷೇತ್ರಗಳು:*– ಸುರೇಂದ್ರ, ಪೌಲ್.ಕೆ ಅವರ (ಮೊ.9141086852) 88–ಹಡಗಲಿ (ವಿಜಯನಗರ ಜಿಲ್ಲೆ), 89–ಹಗರಿಬೊಮ್ಮನಹಳ್ಳಿ (ವಿಜಯನಗರ ಜಿಲ್ಲೆ), 95–ಸಂಡೂರು (ಬಳ್ಳಾರಿ ಜಿಲ್ಲೆ), 96–ಕೂಡ್ಲಿಗಿ (ವಿಜಯನಗರ ಜಿಲ್ಲೆ). ಕೆ.ಕೃಷ್ಣಮೂರ್ತಿ ಅವರ (ಮೊ.9141086851) 91–ಕಂಪ್ಲಿ (ಬಳ್ಳಾರಿ ಜಿಲ್ಲೆ), 93–ಬಳ್ಳಾರಿ ಗ್ರಾಮಾಂತರ (ಬಳ್ಳಾರಿ ಜಿಲ್ಲೆ), 94–ಬಳ್ಳಾರಿ ನಗರ (ಬಳ್ಳಾರಿ ಜಿಲ್ಲೆ), 90–ವಿಜಯನಗರ (ವಿಜಯನಗರ ಜಿಲ್ಲೆ) ಇವರಿಗೆ ಸಂಪರ್ಕಿಸಬಹುದು ಎಂದು ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ರಾಜ್ಯದಲ್ಲಿ ರೈತ ವಿರೋಧಿ ಕಾಂಗ್ರೆಸ್ ಸರ್ಕಾರ ನಡಹಳ್ಳಿ ಆರೋಪ




ಬಳ್ಳಾರಿ ಏ –.ರಾಜ್ಯದಲ್ಲಿ ಅಧಿಕಾರದಲ್ಲಿರುವ ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದ ದಿನದಿಂದಲೂ ಒಂದು ರೈತಪರ ಯೋಜನೆಯನ್ನು ಜಾರಿಗೊಳಿಸಿಲ್ಲ, ಕಳೆದ ಅವಧಿಯಲಿದ್ದ ಯಡಿಯೂರಪ್ಪ ನೇತೃತ್ವದ ಬಿ.ಜೆ.ಪಿ ಸರ್ಕಾರ ರೈತರಿಗೆ ಕಿಸಾನ್ ಸಮ್ಮಾನ ಯೋಜನೆಯಡಿಯಲ್ಲಿ ಕೇಂದ್ರ ಸರ್ಕಾರದ ಆರು ಸಾವಿರ ರೂಪಾಯಿಗಳ ಜೊತೆಗೆ ರಾಜ್ಯದಿಂದ ನಾಲ್ಕು ಸಾವಿರ ರೂಪಾಯಿಗಳನ್ನು ನೇರವಾಗಿ ರೈತರ ಖಾತೆಗೆ ಜಮೆ ಮಾಡುತ್ತಿದ್ದರು, ರೈತ ಮಹಿಳೆಯರಿಗೆ ಹಾಲಿ ಪ್ರೋತ್ಸಾಹ ಧನವೆಂದು ಒಂದು ಲೀಟರ್ ಹಾಲಿಗೆ ಐದು ರೂಪಾಯಿಗಳಂತೆ ಹೈನುಗಾರಿಕೆ ಕುಟುಂಬಕ್ಕೆ ಜಮೆ ಮಾಡಲಾಗುತ್ತಿತ್ತು ಕಾಂಗ್ರೆಸ್ ಸರ್ಕಾರ ಇದನ್ನು ಸಹ ಸರಿಯಾದ ರೀತಿಯಲ್ಲಿ ರೈತರಿಗೆ ನೀಡುತ್ತಿಲ್ಲ ಒಟ್ಟಾರೆಯಾಗಿ ರಾಜ್ಯದ ಕಾಂಗ್ರೆಸ್ ಸರ್ಕಾರ ರೈತ ವಿರೋಧಿ ಸರ್ಕಾರವಾಗಿದೆ ಎಂದು ಬಿ.ಜೆ.ಪಿ ರಾಜ್ಯ ರೈತ ಮೋರ್ಚದ ಅಧ್ಯಕ್ಷ ಎ.ಎಸ್ ನಡಹಳ್ಳಿ ಆರೋಪಿಸಿದರು.

ಅವರು ಇಂದು ನಗರದ ವಾಜಪೇಯಿ ಬಡಾವಣೆಯಲ್ಲಿರುವ ಬಿ.ಜೆ.ಪಿ ಕಛೇರಿಯಲ್ಲಿ ಸುದ್ದಿಗೋಷ್ಠಿಯನ್ನು ನಡೆಸಿ ಮಾತನಾಡಿ, ರೈತರ ಪಂಪ್ ಸೆಂಟ್ ವಿದ್ಯುತ್ ಸಂಪರ್ಕ ಬಿ.ಎಸ್.ವೈ ಅವದಿಯಲ್ಲಿ ರೂ ಐವತ್ತರಿಂದ ಹದಿನೈದು ಸಾವಿರ ರೂಪಾಯಿಗಳವರೆಗೆ ವೆಚ್ಚವಾಗುತ್ತಿತ್ತು, ಆದರೆ ಈಗ ಎರಡು ಮೂರು ಲಕ್ಷ ರೂಪಾಯಿಗಳಾಗುತ್ತಿದೆ, ಅದು ಸಹ ರೈತರೆ ಈ ವೆಚ್ಚವನ್ನು ಭರಿಸಬೇಕಾಗಿದೆ, ಡಿಸೆಲ್ ಪಂಪ್ ಸೆಟ್ ಬಳಸುವ ರೈತರಿಗಾಗಿ ಸಬ್ಸಿಡಿಯಲ್ಲಿ ಡಿಜೆಲ್ ಪೂರೈಸಲಾತ್ತಿತ್ತು ಅದನ್ನು ಸಹ ಈಗಿನ ಸರ್ಕಾರ ತೆಗೆದು ಹಾಕಿದೆ ಇದರಿಂದ ರೈತರು ತೀರಾ ಸಂಕಷ್ಟಕ್ಕೆ ಸಿಲುಕಿದ್ದಾರೆ, ಕಾಂಗ್ರೆಸ್ ಸರ್ಕಾರ ಬರಿ ಭರವಸೆಗಳ ಸರ್ಕಾರ ರೈತರಿಗಾಗಿ ಒಂದು ಯೋಜನೆಯನ್ನು ಇದುವರೆಗೂ ಜಾರಿಗೆ ತರಲಾಗುತ್ತಿಲ್ಲ, ರೈತರ ವಿಳಯದಲ್ಲಿ ಸಂಪೂರ್ಣವಾಗಿ ವಿಫಲವಾಗಿದೆ ಎಂದರು.

ರಾಜ್ಯದಲ್ಲಿ ಮಳೆಯ ಅಭಾವದಿಂದ ಈಗ ಬರಗಾಲ ಪರಿಸ್ಥಿತಿ ಇದೆ ಯಾವೊಬ್ಬ ಸಚಿವರಾಗಲಿ ಶಾಸಕರಾಗಲಿ ಹಳ್ಳಿಗಳಿಗೆ ಹೋಗಿ ಬರ ಅಧ್ಯಯನ ಮಾಡುತ್ತಿಲ್ಲ, ಜಾನುವಾರುಗಳಿಗೆ ಮೇವು ನೀರು ನೀಡುತ್ತಿಲ್ಲ, ಜನಗಳಿಗೆ ಸಹ ಕುಡಿಯುವನ ನೀರಿನ ಅಭಾವ ಎದುರಾಗಿದ್ದು ಇದನ್ನು ಪರಿಹರಿಸಲು ಸಹ ಮುಂದಾಗಿಲ್ಲಿ ಇದರಿಂದಾಗಿ ಹಳ್ಳಿಗಳಲ್ಲಿ ರೈತರು ತೀರಾ ತೊಂದರೆ ಅನುಭವಿಸುತ್ತಿದ್ದಾರೆ,

ಕಳೆದ ಬಿ.ಜೆ.ಪಿ ಸರ್ಕಾರದ ಅವದಿಯಲ್ಲಿ ಎನ್.ಡಿ.ಆರ್.ಎಫ್ ಯೋಜನೆಯ ಹಣದಿಂದ 23 ಲಕ್ಷ ಹೆಕ್ಟರ್‌ಗೆ 28 ಸಾವಿರ ಕೋಟಿ ರೂಪಾಯಿಗಳನ್ನು ಪರಿಹಾರವಾಗಿ ನೀಡಲಾಗಿತ್ತು, ರಾಜ್ಯ ಸರ್ಕಾರ ನಿರ್ವಹಣೆ ಸಾಧ್ಯವಾಗದೆ ಅದು ಕೊಟ್ಟಿಲ್ಲ ಇದು ಕೊಟ್ಟಿಲ್ಲ ಎಂದು ಕೇಂದ್ರದ ಕಡೆ ಬೊಟ್ಟು ಮಾಡುತ್ತಿದೆ, ಸಿದ್ದರಾಮಯ್ಯನವರಿಗೆ ಸರ್ಕಾರ ನಡೆಸಲು ಬಾರದೆ ಕೇಂದ್ರ ಮೇಲೆ ಗೂಬೆ ಕೂರಿಸುತ್ತಿದ್ದಾರೆ ಎಂದು ಕಿಡಿ ಕಾರಿದರು.

ಈ ಎಲ್ಲಾ ಕಾರಣಗಳಿಂದ ಮುಂಬರುವ ಲೋಕಸಭಾ ಚುನಾವಣೆಯಲ್ಲಿ ಬಿ.ಜೆ.ಪಿ ಎಲ್ಲಾ 28 ಕ್ಷೇತ್ರಗಳಲ್ಲಿ ಗೆಲ್ಲಲಿದೆ ಎಂದು ವಿಶ್ವಾಸವನ್ನು ವ್ಯಕ್ತಪಡಿಸಿದರು.

ಈ ಸಂದರ್ಭದಲ್ಲಿ ಬಿ.ಜೆ.ಪಿ ಜಿಲ್ಲಾಧ್ಯಕ್ಷ ಅನಿಲ್ ನಾಯ್ಡು, ಉಪಾಧ್ಯಕ್ಷ ವಿ.ಕೆ ಬಸಪ್ಪ, ಜಿಲ್ಲಾ ರೈತ ಮೋರ್ಚಾ ಅಧ್ಯಕ್ಷ ಐನಾಥರೆಡ್ಡಿ, ರಾಜ್ಯ ಉಪಾಧ್ಯಕ್ಷ ಗುರುಲಿಂಗನಗೌಡ, ಮಾಜಿ ಅಧ್ಯಕ್ಷ ಮುರಹರಿಗೌಡ, ಸುಮಾರೆಡ್ಡಿ, ಮದಿರೆ ಕುಮಾರಸ್ವಾಮಿ ಸೇರಿದಂತೆ ಹಲವಾರು ರೈತ ಮುಂಖಡರಿದ್ದರು.

## ಸಂಸ್ಕೃತಿ–ಸಂಸ್ಕಾರ ಶಿಬಿರ ಪ್ರಾರಂಭೋತ್ಸವ ಸಮಾರಂಭ
# ದೇಶ ಪ್ರಗತಿ ಪಥದಲ್ಲಿ ಮುನ್ನಡೆಯಲು ಮಕ್ಕಳು ಸುಸಂಸ್ಕೃತರಾಗಿ ಬೆಳೆಯಬೇಕು



ಗದಗ–13 : ಮಕ್ಕಳು ಚಿಕ್ಕಂದಿನಿಂದಲೇ ಕ್ರಮಬದ್ಧ ಜೀವನಶೈಲಿ ಅಳವಡಿಸಿಕೊಂಡು ಬೆಳೆಯಬೇಕು, ಇಲ್ಲದಿದ್ದರೆ ಅವರೆಂದೂ ಸದ್ವರ್ತನೆಯ ಗುಣಶೀಲ ನಾಗರಿಕರಾಗಿ ಬೆಳೆಯಲಾರರು. ಮಕ್ಕಳು ಸಚ್ಚಾರಿತ್ರ್ಯವಂತರಾಗಿ ಬೆಳೆಯದಿದ್ದರೆ ದೇಶ ಎಷ್ಟೇ ಪ್ರಗತಿ ಹೊಂದಿದರೂ ಪ್ರಗತಿಯ ಪರಿಣಾಮ ಫಲಕಾರಿಯಾಗದೇ ಮುಂದೊಂದು ದಿನ ಆ ಪ್ರಗತಿ ಹಿನ್ನಡೆಯಾಗಬಹುದು. ಆದ್ದರಿಂದ ದೇಶವು ಪ್ರಗತಿ ಪಥದಲ್ಲಿ ಮುನ್ನಡೆಯಲು ಮಕ್ಕಳು ಸುಸಂಸ್ಕೃತರಾಗಿ ಬೆಳೆಯಬೇಕೆಂದು ಖ್ಯಾತ ವಾಗ್ಮಿಗಳು ಮತ್ತು ಪ್ರಸ್ತುತ ಶ್ರೀ ಜಗದ್ಗುರು ತೋಂಟದಾರ್ಯ ಜಾತ್ರಾ ಮಹೋತ್ಸವದ ಅಧ್ಯಕ್ಷರಾಗಿರುವ ಪ್ರೊ. ಕೆ. ಎಚ್. ಬೇಲೂರ ತಿಳಿಸಿರುವರು. ಶ್ರೀಮನ್ನಿರಂಜನ ಯಳಂದೂರು ಬಸವಲಿಂಗ ಮಹಾಸ್ವಾಮಿಗಳವರ ಸ್ಮಾರಕ ಯೋಗಪಾಠಶಾಲೆಯ ಬಸವ ಯೋಗ ಕೇಂದ್ರ ಗದಗ ಮತ್ತು ಶ್ರೀ ಜಗದ್ಗುರು ತೋಂಟದಾರ್ಯ ಜಾತ್ರಾ ಮಹೋತ್ಸವ ಸಮಿತಿ–2024 ಗದಗ ಇವರುಗಳ ಸಹಯೋಗದಲ್ಲಿ ಬೇಸಿಗೆ ರಜೆ ಪ್ರಯುಕ್ತ ಪ್ರಾಥಮಿಕ ಮತ್ತು ಪ್ರೌಢಶಾಲಾ ಮಕ್ಕಳಿಗಾಗಿ ಸಿದ್ಧಲಿಂಗ ನಗರದಲ್ಲಿನ ಬಸವ ಯೋಗ ಮಂದಿರ (ಬಸವ ಪ್ರಭೆ ಕ್ಯಾಂಪಸ್) ಆವರಣದಲ್ಲಿ ಆಯೋಜಿಸಿರುವ 19 ನೆಯ ಸಂಸ್ಕೃತಿ–ಸಂಸ್ಕಾರ ಶಿಬಿರ ಪ್ರಾರಂಭೋತ್ಸವ ಸಮಾರಂಭದ ಅಧ್ಯಕ್ಷತೆ ವಹಿಸಿ ಮಾತನಾಡಿದ ಪ್ರೊ. ಕೆ. ಎಚ್. ಬೇಲೂರ ಇವರು ಇಂದು ನಮ್ಮ ಮಕ್ಕಳಿಗೆ ಮನೆ ಮತ್ತು ಶಾಲೆಗಳಲ್ಲಿ ನಮ್ಮ ಭಾರತೀಯ ಸಂಸ್ಕೃತಿ–ಸಂಸ್ಕಾರಗಳ ಶಿಕ್ಷಣ ದೊರೆಯದಾಗಿದೆ. ಇಂದಿನ ಮಕ್ಕಳು ನಮಗಿಂತಲೂ ಹೆಚ್ಚು ಬುದ್ಧಿವಂತರಿರುವರು, ಇವರಿಗೆ ಶಿಕ್ಷಣ ಕಲಿಕೆ ಜೊತೆಯಲ್ಲಿ ಉತ್ತಮ ಆಚಾರ–ವಿಚಾರ, ಆಹಾರ–ವಿಹಾರ,. ನಡೆ–ನುಡಿಗಳನ್ನು ರೂಢಿಸಿದರೆ ಅವರು ಭವಿಷ್ಯದಲ್ಲಿ ಸತ್ಪ್ರಜೆಗಳಾಗಿ ಬೆಳೆಯುವರೆಂದು ಹೇಳಿದರು.

ಮುಖ್ಯ ಅತಿಥಿಗಳಾಗಿ ಆಗಮಿಸಿದ ಗಣ್ಯ ಉದ್ದಿಮೆದಾರರು ಮತ್ತು ಶ್ರೀ ಜಗದ್ಗುರು ತೋಂಟದಾರ್ಯ ಜಾತ್ರಾ ಮಹೋತ್ಸವ ಸಮಿತಿಯ ಕಾರ್ಯದರ್ಶಿ ಪ್ರಣವ ಎಸ್. ವಾರಕರ ಇವರು ಸಸಿಗೆ ನೀರೆರೆಯುವ ಮೂಲಕ ಶಿಬಿರ ಉದ್ಘಾಟಿಸಿ ಮಾತನಾಡುವಾಗ್ಗೆ "ಸಂಸ್ಕೃತಿ–ಸಂಸ್ಕಾರ" ಶಿಬಿರ ಎಂಬ ಹೆಸರಿನಲ್ಲಿಯೇ ಒಂದು ಹೊಸತನ ಮತ್ತು ವಿಶೇಷತೆ ಇರುವದು. ಶಿಬಿರದಲ್ಲಿ ಯೋಗಾಭ್ಯಾಸ, ಭಾರತೀಯ ಆಟೋಟ, ವ್ಯಕ್ತಿತ್ವ ವಿಕಸನ, ವಚನ ಸಂಗೀತ, ಮನೋಲ್ಲಾಸ ಇನ್ನಿತರೆ ವಿಷಯಗಳ ತರಬೇತಿ ನೀಡಲಾಗುವದೆಂದು ಎಂಬ ವಿಷಯವನ್ನು ಶಿಬಿರದ ಸಂಯೋಜಕರಿಂದ ತಿಳಿದು ಸಂತೋಷವಾಯಿತು.

ಪ್ರಸ್ತುತ ದಿನಮಾನದಲ್ಲಿ ಇಂಥ ಶಿಬಿರಗಳ ಅಗತ್ಯವಿದೆ. ಇದೊಂದು ಮಾದರಿಯ ಮತ್ತು ಅನುಕರಣೀಯ ಶಿಬಿರವಾಗಿದೆ. ಈ ಶಿಬಿರದ ಯಶಸ್ಸಿನಲ್ಲಿಯೇ ಶ್ರೀ ಜಗದ್ಗುರು ತೋಂಟದಾರ್ಯ ಜಾತ್ರಾ ಮಹೋತ್ಸವದ ಸಾರ್ಥಕತೆ ಅಡಗಿದೆ ಎಂದು ಮನತುಂಬಿ ಮಾತನಾಡಿದರು.ವೇದಿಕೆಯಲ್ಲಿ ನಿವೃತ್ ಮುಖ್ಯೋಪಾಧ್ಯಾಯ ಶಿವನಗೌಡ ಗೌಡರ, ಹೊಂಬಳ ಸರಕಾರಿ ಪಿ.ಯು. ಕಾಲೇಜ ಉಪನ್ಯಾಸಕ ಹನಮಂತಗೌಡ ಬಿ. ಗೌಡರ, ಅಕ್ಕಮಹಾದೇವಿ ಯೋಗ ವಿಜ್ಞಾನ ಕೇಂದ್ರದ ಹಿರಿಯ ಸದಸ್ಯೆ ವಿಜಯಲಕ್ಷ್ಮೀ ಮೇಕಳಿ ಉಪಸ್ತಿತರಿದ್ದು, ಪಾಲಕರ ಪರವಾಗಿ ಶಿವನಗೌಡ ಗೌಡರು ಇವರು ಇಂದು ಹಿರಿಕಿರಿಯ ರೆಲ್ಲ ರೂ ಟಿ.ವಿ., ಮೊಬೈಲ್ ಗೀಳಿನಿಂದ ಹೊರಬರಬೇಕಾಗಿದೆ.ಮಕ್ಕಳಲ್ಲಿ ಕ್ರಿಯಾಶೀಲತೆ ಗುಣ ಬೆಳೆಯಬೇಕಾಗಿದೆ. ಈ ಕಾರ್ಯ ಸಾಧನೆಗೆ ಮಕ್ಕಳಿಗೆ ಈ ಶಿಬಿರವು ಸಹಕಾರಿಯಾಗುವದೆಂದು ಹೇಳಿದರು. ಸಮಾರಂಭದಲ್ಲಿ ಶಿಬಿರಾರ್ಥಿಗಳು ಮತ್ತು ಪಾಲಕರು ಉಪಸ್ಥಿತರಿದ್ದರು. ಪ್ರಾರಂಭದಲ್ಲಿ ಶಿಬಿರ ಶಿಕ್ಷಕಿ ಸುನಂದಾ ಜ್ಯಾನೋಪಂತರ ಪ್ರಾರ್ಥನೆ ಹೇಳಿದರು. ಶಿಬಿರ ಶಿಕ್ಷಕ ಚೇತನ ಚುಂಚಾ ಸರ್ವರಿಗೂ ಸ್ವಾಗತ ಕೋರಿದರು. ಬಸವ ಯೋಗ ಕೇಂದ್ರದ ಪ್ರಾಚಾರ್ಯ ಕೆ. ಎಸ್. ಪಲ್ಲೇದ ಪ್ರಾಸ್ತಾವಿಕ ನುಡಿ ತಿಳಿಸಿದರು. ಜಯಶ್ರೀ ಡಾವಣಗೇರಿ ವಂದಿಸಿದರು. ಬಸವೇಶ್ವರ ಪ್ರಾರ್ಥಮಿಕ ಶಾಲಾ ದೈಹಿಕ ಶಿಕ್ಷಣ ಶಿಕ್ಷಕ ಮತ್ತು ಶಿಬಿರದ ಸಹ ಸಂಯೋಜಕರಾದ ಎಸ್. ಎಂ. ಬುರಡಿ ಗುರುಗಳು ಕಾರ್ಯಕ್ರಮ ನಿರೂಪಿಸಿದರು.

## ಅತಿ ಶೀಘ್ರದಲ್ಲಿ ರಾಜ್ಯದಲ್ಲಿ ಬಿಜೆಪಿ ಸರಕಾರ ರಚನೆ: ಮಾಜಿ ಸಚಿವ ರಮೇಶ ಜಾರಕಿಹೊಳಿ ಭವಿಷ್ಯ

(1 ನೇ ಪುಟದಿಂದ)

ಮಾಜಿ ಶಾಸಕ ಅನಿಲ್ ಬೆನಕೆ ಮಾತನಾಡಿ, ಜಾತಿ? ಮತದ ವಿಷ ಬೀಜ ಬಿತ್ತುವ ಮೂಲಕ ಕಾಂಗ್ರೆಸ್ ಸಮಾಜ ಒಡೆಯುವ ಕೆಲಸ ಮಾಡುತ್ತಿದೆ. ಇದಕ್ಕೆ ಈ ಚುನಾವಣೆಯಲ್ಲಿ ಬುದ್ಧಿ ಕಲಿಸಬೇಕು ಕೋವಿಡ ಸಮಯದಲ್ಲಿ ನರೇಂದ್ರ ಮೋದಿಯವರು ವ್ಯಾಕ್ಸಿನೇಷನ್ ನೀಡಿ ಇಡೀ ಪ್ರಪಂಚಕ್ಕೆ ಭಾರತ ಶಕ್ತಿ ಏನುವುದು ತೋರಿಸಿ ಕೊಟ್ಟರು ,ವ್ಯಾಕ್ಸಿನೇಷನ್ ಕಾಂಗ್ರೆಸ್ ನವರು ಮನ ಬಂದಂತೆ ಟೀಕಿಸಿದ್ದರು ವಾಗ್ದಾಳಿ ನಡೆಸಿದ್ದರು ಗ್ರಾಮೀಣ ಮಂಡಳ ಅಧ್ಯಕ್ಷ ಧನಂಜಯ ಜಾಧವ್ ಮಾತನಾಡಿ ಸುರೇಶ ಅಂಗಡಿ ಹಾಗೂ ಜಗದೀಶ ಶೆಟ್ಟರ ತಮ್ಮ ಅಧಿಕಾರವಧಿಯಲ್ಲಿ ಹಲವಾರು ಯೋಜನೆಗಳ ಅನುಷ್ಠಾನದೊಂದಿಗೆ ಜಿಲ್ಲೆಗೆ ವಿಶೇಷ ಕೊಡುಗೆ ನೀಡಿದ್ದಾರೆ.. ನರೇಂದ್ರ ಮೋದಿಯಂತಹ ಧಿಮಂತ ನಾಯಕನ ಅವಶ್ಯಕತೆ ದೇಶಕ್ಕೆ ಇದೆ. ಜಮ್ಮು ಕಾಶ್ಮೀರದಲ್ಲಿ 370 ಕಲಂ ತೆಗೆದು ಹಾಕಿ, ರಾಮ ಮಂದಿರ ನಿರ್ಮಾಣ ಮಾಡಿ ದೇಶದಲ್ಲಿ ಶಾಂತತೆಯನ್ನು ನೆಲೆಸುವಂತೆ ಮಾಡಿದ್ದಾರೆ. ಬರುವ ದಿನಗಳಲ್ಲಿ ಒಂದು ದೇಶ ಒಂದು ಚುನಾವಣೆ ಹಾಗೂ ಎಲ್ಲರಿಗೂ ಒಂದೆ ಕಾನೂನು ಜಾರಿಗೊಳಿಸಿ ಪಿಓಕೆಯನ್ನು ವಶಪಡಿಸಿಕೊಳ್ಳಲು ನರೇಂದ್ರ ಮೋದಿಯವರನ್ನು ಮತ್ತೊಮ್ಮೆ ಪ್ರಧಾನಿಯನ್ನಾಗಿ ಮಾಡಿ ಅಖಂಡ ಭಾರತ ನಿರ್ಮಿಸಲು ನಾವೆಲ್ಲ ಕಾರ್ಯಪ್ರವೃತ್ತರಾಗೋಣ ಎಂದರು ಬಿಜೆಪಿ ಗ್ರಾಮೀಣ ಬೂತ್ ಮಟ್ಟದ ಸಮಾವೇಶದಲ್ಲಿ ಬಿಜೆಪಿ ಜಿಲ್ಲಾಧ್ಯಕ್ಷ ಸುಭಾಷ್ ಪಾಟೀಲ್ , ಚಿಕ್ಕ ರೇವಣ್ಣ, ಸೇರಿ ಹಲವು ಜನ ಮುಖಂಡರು ಇದ್ದರು.

# ಜೀವನದಲ್ಲಿ ಕಷ್ಟಪಟ್ಟು ಓದಿದರೆ ಯಾವುದು ಅಸಾಧ್ಯವಲ್ಲ :ಪದ್ಮಭೂಷಣ ಡಾ.ಸುಧಾ ಮೂರ್ತಿ

(1 ನೇ ಪುಟದಿಂದ)

ಬೆಂಗಳೂರಿನಂತ ಮಹಾನಗರಗಳಲ್ಲಿ ಶಿಕ್ಷಣ ದುಬಾರಿಯಾಗಿದೆ. ಆದರೆ ಈ ಭಾಗದಲ್ಲಿ ಅತ್ಯಂತ ಕಡಿಮೆ ವೆಚ್ಚದಲ್ಲಿ ಗುಣಮಟ್ಟದ ಶಿಕ್ಷಣ ನೀಡಲಾಗುತ್ತಿದೆ. ಕೆಎಲ್‌ಇ ಸಂಸ್ಥೆಯ ಛತ್ರದಲ್ಲಿ ಕೋಟ್ಯಂತರ ವಿದ್ಯಾರ್ಥಿಗಳು ರಾಷ್ಟ್ರ ನಿರ್ಮಾಣದಲ್ಲಿ ತೊಡಗಲಿ' ಎಂದು ಹಾರೈಸಿದರು. ಸಭಿಕರನ್ನು ಸ್ವಾಗತಿಸಿ ಪ್ರಾಸ್ತಾವಿಕ ನುಡಿಗಳನ್ನಾಡಿದ ಕೆಎಲ್‌ಇ ಸಂಸ್ಥೆಯ ಕಾರ್ಯಾಧ್ಯಕ್ಷರಾದ ಡಾ.ಪ್ರಭಾಕರ ಕೋರೆಯವರು, 'ಗ್ರಾಮೀಣ ವಿದ್ಯಾರ್ಥಿಗಳ ಗುಣಾತ್ಮಕ ಶಿಕ್ಷಣಕ್ಕಾಗಿಯೇ ಕೆಎಲ್‌ಇ ಸಂಸ್ಥೆಯು ಅಂತರಾಷ್ಟ್ರೀಯ ಗುಣಮಟ್ಟದ ಆಂಗ್ಲ ಮಾಧ್ಯಮ ಶಾಲೆಯನ್ನು ಪ್ರಾರಂಭಿಸಿರುವುದು ಹೆಮ್ಮೆ ತಂದಿದೆ. ಈ ಶಾಲೆ ಪ್ರಾರಂಭಗೊಳ್ಳಲು ದಾನವನ್ನು ನೀಡಿದ ಶ್ರೀಮತಿ ಮಾಲುತಾಯಿ ಶಿವಪುತ್ರ ಶಿರಕೋಳಿಯವರನ್ನು ನಾನು ಸಂಸ್ಥೆಯಿಂದ ಅಭಿನಂದಿಸುತ್ತೇನೆ. ಉತ್ತರ ಕರ್ನಾಟಕದ ಮಕ್ಕಳಿಗೆ ಶಿಕ್ಷಣವನ್ನು ನೀಡಬೇಕೆಂಬ ಉದ್ದೇಶದಿಂದಲೇ ಅಸಂಖ್ಯೆ ದಾನಗಳು ಹಾಗೂ ಮಹಾದಾನಗಳು ಭೂಮಿ ಹಾಗೂ ಹಣವನ್ನು ನೀಡಿದ್ದನ್ನು ಸಂಸ್ಥೆಯು ಎಂದಿಗೂ ಮರೆಯುವುದಿಲ್ಲ.ಮುಂಬರುವ ಎರಡುವರ್ಷಗಳಲ್ಲಿ ಅನೇಕ ಕಾರ್ಯಕ್ರಮಗಳ ಮೂಲಕ ಜನಸೇವೆಗೆ ತೊಡಗಿಸಿಕೊಳ್ಳಲಿದೆ. ಕೇವಲ ಆರು ತಿಂಗಳಲ್ಲಿ ಹುಬ್ಬಳ್ಳಿಯ ವೈದ್ಯಕೀಯ ಮಹಾವಿದ್ಯಾಲಯ ಹಾಗೂ ಮುಂಬಯಿನ ಶಾಲೆ ಜನ ಸೇವೆಗೆ ಅರ್ಪಣೆಯಾಗಲಿದೆ. ಅಲ್ಲದೆ ಇನ್ನೆರಡು ತಿಂಗಳಲ್ಲಿ ಬೆಳಗಾವಿಯಲ್ಲಿ 300 ಹಾಸಿಗೆಗಳ ಕ್ಯಾನ್ಸರ್ ಆಸ್ಪತ್ರೆ ಲೋಕಾರ್ಪಣೆಗೊಳ್ಳಲಿದೆ. ಸಂಸ್ಥೆಯು ಕನ್ನಡವನ್ನು ಕಟ್ಟಿಬೆಳೆಸುವಲ್ಲಿ ಕಂಕಣಬದ್ಧವಾಗಿದ್ದು ಗ್ರಾಮೀಣ ಪ್ರದೇಶಗಳಲ್ಲಿ ಕನ್ನಡ ಕಾನ್ವೆಂಟ್ ಶಾಲೆಗಳನ್ನು ತೆರೆಯಲಿದೆ. 4500 ಹಾಸಿಗೆಗಳ ಆಸ್ಪತ್ರೆಯ ಮೂಲಕ ರೋಗಿಗಳ ಸೇವೆಯಲ್ಲಿ ನಿರತವಾಗಿರುವ ಸಂಸ್ಥೆಯು ಅಂಗಾಂಗ ಕಸಿ ಮಾಡುವಲ್ಲಿ ಮುಂಚೂಣಿಯಲ್ಲಿದೆ. ಶೀಘ್ರದಲ್ಲಿಯೇ ಲಂಗ್ಸ್(ಶ್ವಾಸಕೋಶ) ಕಸಿ ನೆರವೇರಿಸಲು ಅಣಿಯಾಗಿದ್ದೇವೆ' ಎಂದು ಹೇಳಿದರು.

ಹುಕ್ಕೇರಿ ಮತಕ್ಷೇತ್ರದ ಶಾಸಕರಾದ ನಿಖಿಲ್ ಕತ್ತಿ ಅವರು ಮಾತನಾಡಿದರು. ನಿಡಸೋಸಿ ದುರದುಂಡೀಶ್ವರ ಸಂಸ್ಥಾನದ ಜಗದ್ಗುರುಗಳಾದ ಪಂಚಮ ಶಿವಲಿಂಗೇಶ್ವರ ಮಹಾಸ್ವಾಮೀಜಿಯವರು ಆಶೀರ್ವಚನ ನೀಡುತ್ತಾ,ಕೆಎಲ್‌ಇ ಸಂಸ್ಥೆಯು ಅಗಾಧವಾಗಿ ಬೆಳೆದು ನಿಂತಿದೆ. ಗ್ರಾಮೀಣ ಭಾಗದಲ್ಲಿ ಅದ್ಭುತವಾದ ಶಾಲೆಗಳನ್ನು ನಿರ್ಮಿಸಿ ಅಕ್ಷರ ಬೀಜ ಬಿತ್ತುವ ಮಹತ್ತರ ಕೆಲಸಮಾಡಿದೆ ಎಂದ ಅವರು ಯಾವ ತಾಲೂಕಿನಲ್ಲಿ ಶಿಕ್ಷಣ ಹಿಂದುಳಿದಿದೆ ಎಂದು ಗಮನಿಸಿ ಆ ಪ್ರದೇಶದಲ್ಲಿಕೆಎಲ್‌ಇ ಸಂಸ್ಥೆಯು ಶಾಲೆಗಳನ್ನು ತೆರೆಯುವುದರ ಮೂಲಕ ನಾಂದಿ ಹಾಡಬೇಕೆಂದು ನುಡಿದರು. ಸಮಾರಂಭದ ಅಧ್ಯಕ್ಷತೆಯನ್ನು ಸಂಸ್ಥೆಯ ಅಧ್ಯಕ್ಷರು ಹಾಗೂ ಶಾಸಕರಾದ ಮಹಾಂತೇಶ ಕೌಜಲಗಿಯವರು ವಹಿಸಿದ್ದರು.

ಇದೇ ಸಂದರ್ಭದಲ್ಲಿ ನೂತನವಾಗಿ ರಾಜ್ಯಸಭೆಗೆ ಆಯ್ಕೆಯಾದ ಡಾ.ಸುಧಾ ಮೂರ್ತಿಯವರನ್ನು ಹಾಗೂ ದಾನಿಗಳಾದ ಅಪ್ಪಾಸಾಹೇಬ ಶಿರಕೋಳಿ ಹಾಗೂ ಕುಟುಂಬದವರನ್ನು ಕೆಎಲ್‌ಇ ಸಂಸ್ಥೆಯಿಂದ ಸತ್ಕರಿಸಲಾಯಿತು. ವಿಧಾನ ಪರಿಷತ್ ಸದಸ್ಯರಾದ ಪ್ರಕಾಶ ಹುಕ್ಕೇರಿ, ರಾಹುಲ್ ಜಾರಕಿಹೊಳಿ, ಕೆಎಲ್‌ಇ ಆಡಳಿತ ಮಂಡಳಿಯ ಸದಸ್ಯರಾದ ಶಂಕರಣ್ಣಾ ಮುನವಳ್ಳಿ, ವಾಯ್.ಎಸ್.ಪಾಟೀಲ, ಜಯಾನಂದ ಮುನವಳ್ಳಿ, ಬಾಬಣ್ಣಾ ಮೆಟಗುಡ್ಡ, ಅನೀಲ ಪಟ್ಟೇದ, ಬಿ.ಆರ್.ಪಾಟೀಲ, ಮಹಾಂತೇಶ ಕವಟಗಿಮಠ, ಅಮಿತ ಕೋರೆ, ಪ್ರವೀಣ ಬಾಗೇವಾಡಿ, ಡಾ.ಎಚ್.ಬಿ.ರಾಜಶೇಖರ, ಆಶಾ ಕೋರೆ,ಎಂ.ಸಿ.ಕೊಳ್ಳಿ ಮೊದಲಾದ ಗಣ್ಯರು ಉಪಸ್ಥಿತರಿದ್ದರು. ಐಶ್ವರ್ಯಾ ಗಣಾಚಾರಿ ನಿರೂಪಿಸಿ ವಂದಿಸಿದರು.

## ಎಂ.ಎಸ್.ಸೋಮಲಿಂಗಪ್ಪ ನೇತೃತ್ವದಲ್ಲಿ ಬಿಜೆಪಿ ಅಭ್ಯರ್ಥಿ
# ಡಾ.ಬಸವರಾಜ್ ಪರ ಎಂ.ಎಸ್.ಸಿದ್ದಪ್ಪ ಬಿರುಸಿನ ಮತಯಾಚನೆ



ಬಳ್ಳಾರಿ ಏ – ಕೊಪ್ಪಳ ಲೋಕಸಭಾ ಚುನಾವಣೆ 92–ಸಿರುಗುಪ್ಪ ವಿಧಾನಸಭಾ ಕ್ಷೇತ್ರದ ಹಚ್ಚೋಳ್ಳಿ, ರಾವಿಹಾಳ್ ಮತ್ತು ರಾರಾವಿ ಮಹಾಶಕ್ತಿ ಕೇಂದ್ರದ ಗ್ರಾಮಗಳಲ್ಲಿ ಬಿಜೆಪಿ ಅಭ್ಯರ್ಥಿಯಾದ ಡಾಕ್ಟರ್ ಬಸವರಾಜ್ ಎಸ್. ಅವರ ಪರವಾಗಿ ಮಾಜಿ ಶಾಸಕರಾದ ಎಂ.ಎಸ್. ಸೋಮಲಿಂಗಪ್ಪ ಅವರ ನೇತೃತ್ವದಲ್ಲಿ ಬಳ್ಳಾರಿ ಜಿಲ್ಲಾ ಯುವಮೋರ್ಚ ಅಧ್ಯಕ್ಷರಾದ ಎಂ.ಎಸ್.ಸಿದ್ದಪ್ಪ ಮತಯಾಚನೆ ಮತ್ತು ಬಹಿರಂಗ ಸಭೆಯನ್ನು ಏರ್ಪಡಿಸಲಾಗಿತ್ತು. ಈ ಸಭೆಗಳಲ್ಲಿ ಹೆಚ್ಚಿನ ಜನಸಂಖ್ಯೆಯಲ್ಲಿ ಕಾರ್ಯಕರ್ತರು ಭಾಗಿಯಾಗಿ ಯಶಸ್ವಿಗೊಳಿಸಿದರು.

ಈ ಸಂದರ್ಭದಲ್ಲಿ ಬಳ್ಳಾರಿ ಬಿಜೆಪಿ ಜಿಲ್ಲಾ ಅಧ್ಯಕ್ಷರಾದ ಅನಿಲ್ ನಾಯ್ಡು ಮೋಕ, ಬಿಜೆಪಿ ಮಂಡಲ ಅಧ್ಯಕ್ಷರಾದ ಕುಂಟ್ನಾಳ ಮಲ್ಲಿಕಾರ್ಜುನ ಸ್ವಾಮಿ, ಮಾಜಿ ಸಂಸದರಾದ ಶಿವರಾಮೇಗೌಡ, ಗಾಲಿ ಅರುಣಾ ಲಕ್ಷ್ಮಿ ರವರು, ರಾಧಾ, ದರಪ್ಪ ನಾಯಕ, ಸ್ವಾಮಿ, ದಮ್ಮೂರು ಶೇಖರ, ಮಾಣಿಕ್ ರೆಡ್ಡಿ, ಹೆಚ್. ಶಿವರಾಮಗೌಡ, ಮೆಕೆಲಿ ವೀರೇಶ, ಎಂ ಆರ್ ಗೌಡ , ವೀರನಗೌಡ, ಶರಣಬಸನಗೌಡ, ವೀರೇಂದ್ರ ಸಾಹುಕಾರ್,ಕಾರ್ಯಕರ್ತರು, ಊರಿನ ಮುಖಂಡರು, ಯುವ ಮಿತ್ರರು, ಮಹಿಳೆಯರು, ರೈತರು, ಗ್ರಾಮಸ್ಥರು ಉಪಸ್ಥಿತರಿದ್ದರು.

# ಜಾತ್ರೆಗಳು ದೈವಾರಾಧನೆಗೆ ಸೀಮಿತವಾಗದೆ, ಸಮಾಜ ಮುಖಿಯಾಗಲಿ–ಮುರಳಿ

ಮೂಡಲಗಿ: ಹಬ್ಬ ಹರಿದಿನ ನಿಮಿತ್ತ ಬಡವ, ದಲಿತರ, ದೀನರಸೇವೆ ಮಾಡೋಣ, ಜಾತ್ರೆಗಳು ದೈವಾರಾಧನೆಗೆ ಸೀಮಿತವಾಗದೇ ಸಮಾಜ ಮುಖಿಯಾಗಲಿ ಎಂದು ಮುರಳಿ ವಜ್ಜರಮಟ್ಟಿ ಹೇಳಿದರು.

ಅವರು ತಾಲೂಕಿನ ಪುಲಗಡ್ಡಿಯ ಗ್ರಾಮದಲ್ಲಿ ಶ್ರೀಗುರು ಚಕ್ರವರ್ತಿ ಸದಾಶಿವ ಶಿವಯೋಗಿಯವರ, ಶ್ರೀ ಚಂದ್ರಮ್ಮ ದೇವಿಯ ಹಾಗೂ ಶ್ರೀ ಶೆಟ್ಟೆಮ್ಮದೇವಿ ಜಾತ್ರಾ ಮಹೋತ್ಸವದ ನಿಮಿತ್ತ ಆದಿಕವಿ ವಾಲ್ಮೀಕಿ ಸಭಾಂಗಣದಲ್ಲಿ ಶನಿವಾರ ಜರುಗಿದ ಉಚಿತ ಆರೋಗ್ಯ ಶಿಬಿರ ಉದ್ಘಾಟಿಸಿ ಮಾತನಾಡಿದರು. ಸಾಹಿತಿ ಹಾಗೂ ಕಲಾವಿದ ಜಯಾನಂದ ಮಾದರ ಸ್ವಾಗತಿಸಿ, ನಿರೂಪಿಸಿದರು. ಬಡವರ ಸೇವೆಯೇ ಈಶ ಸೇವೆ, ಗ್ರಾಮೀಣ ಭಾಗದ ಜನತೆ ಸಮಾಜಿಕವಾಗಿ ಜಾಗೃತಗೊಳ್ಳಬೇಕು, ಶಿಕ್ಷಣಕ್ಕೆ ಹೆಚ್ಚಿನ ಆದ್ಯತ್ತೆ ನೀಡುವದರಿಂದ ಸಮಾಜದಲ್ಲಿ ಸುಧಾರಣೆ ಕಾಣಲು ಸಾಧ್ಯ ಎಂದರು.

ಮುಸಗುಪ್ಪಿ ಪ್ರಾಥಮಿಕ ಆರೋಗ್ಯ ಕೇಂದ್ರದ ವೈದ್ಯಾಧಿಕಾರಿ ಡಾ.ಚನ್ನಪ್ಪ ಕುಂಬಾರ ಮಾತನಾಡಿ, ಆರೋಗ್ಯದ ಕುರಿತು ನಿರ್ಲಕ್ಷ್ಯ ಸಲ್ಲದು, ಸ್ವಚ್ಛತೆಯ ಕಡೆಗೆ ಗಮನ ಹರಿಸಬೇಕು ಎಂದರು.

ಸಾನಿಧ್ಯ ವಹಿಸಿದ್ದ ಕೋಚರಿಯ ಶ್ರೀ ಕಲ್ಮೇಶ್ವರ ಸ್ವಾಮೀಜಿ, ಅರಭಾವಿಯ ಯಲ್ಲಪ್ಪ ಅಜ್ಜನವರು ಮತ್ತು ಅಧ್ಯಕ್ಷತೆವಹಿಸಿದ್ದ ಮುಖ್ಯೋಪಾಧ್ಯಾಯ ಅಧ್ಯಕ್ಷತೆವಹಿಸಿದ್ದ ಮುಖ್ಯೋಪಾಧ್ಯಾಯ ಎಸ್.ಎಮ್.ನಾಯಿಕ ಮಾತನಾಡಿದರು ಡಾ.ಸ್ವೇತಾ ದೊಡ್ಡಮನಿ, ಡಾ.ಅಶ್ವಿನಿ ಮಲ್ಲಗೆಪ್ಪಗೋಳ, ಮಲ್ಲವ್ವ ನಾಯಿಕ, ಡಿ.ಕೆ.ಪತ್ತಾರ. ರಾಮಚಂದ್ರ ಸಣ್ಣಕ್ಕಿ, ಶಾಂತಾ ಕಳ್ಳಿಮನಿ, ಗೀತಾ ಕಮತರ, ಮಂಜು ಜೋಗಿ, ಚಂದ್ರಕಾಂತ ಕದಮ್ಮ, ಸಂಜು ಕಬ್ಬೂರ, ಬಸವರಾಜ ನಾವಿ, ಆಶಾ ಹಾಗೂ ಅಂಗನವಾಡಿ ಕಾರ್ಯಕರ್ತರು ಹಾಗೂ ಜಾತ್ರಾಮಹೋತ್ಸವ ಸಮೀತಿಯವರು ಭಾಗವಹಿಸಿದ್ದರು.